<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

<u>ಅಸಲು ದಾವಾ ನಂಬ್ರ: **79/2014** ಪಿಡಬ್ಲ್ಯೂ- **1**</u>

ದಿನಾಂಕ: **07-02-2019** ರಂದು ಸಾಕ್ಷಿಯನ್ನು ಪುನಹ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು

<u>ಮುಂದುವರಿದ ಪಾಟಿ ಸವಾಲು: 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಜೆ.ಎಸ್. ರವರಿಂದ</u>

ನಿಪಿ-*5* ರಂತೆ ನಾನು ನೀಡಿದ ನೋಟೀಸ್ ಗೆ ಪ್ರತಿವಾದಿ-*3* ಮತ್ತು *4* ರವರು ನಿಪಿ-*6* ರಂತೆ ಪ್ರತ್ಯುತ್ತರವನ್ನು ನೀಡಿರುತ್ತಾರೆ ಅದನ್ನು ನಾನು ದಾವೆ ದಾಖಲಿಸುವ ಪೂರ್ವದಲ್ಲಿ ಓದಿ ನೋಡಿರುತ್ತೇನೆ. ನಾನು ನನ್ನ ನೋಟೀಸ್ ನಲ್ಲಿ ಮಿಲಿಟರಿ ಸರ್ವೀಸ್ ನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿರುತ್ತೇನೆ ಅದನ್ನು ಪ್ರತಿವಾದಿ-*3* ಮತ್ತು *4* ರವರು ಅಲ್ಲಗಳೆದಿರುತ್ತಾರೆ ಅದು ನನ್ನ ಗಮನಕ್ಕೆ ಬಂದಿರುತ್ತದೆ. ಆ ವಿಚಾರದ ಕುರಿತು ಈ ದಾವೆ ಹಾಕುವಾಗ ವಕೀಲರಿಗೆ ದಾಖಲೆಯನ್ನು ಕೊಟ್ಟಿರುವುದಿಲ್ಲ, ಬೇಕಾದರೆ ನೀಡುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ-*3* ಮತ್ತು *4* ರವರಿಗೆ ಕೊಟ್ಟ ನೋಟೀಸ್ ನಲ್ಲಿ ನನಗೆ ನಷ್ಟವಾಗಿದೆ ಎಂದು ಹೇಳಿದ್ದು ಎಷ್ಟು ನಷ್ಟವಾಗಿದೆ ಎಂದು ತಿಳಿಸಿದ್ದೀರಿ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಅದು ಯಾವ ಬಾಬ್ತು ಮೇಲೆ ನಷ್ಟ ಎಂದು ಹೇಳುತ್ತೀರಿ ಎಂದರೆ ಸಾಕ್ಷಿ ಜಾಗ ಮಂಜೂರಾದ ಸಮಯದಲ್ಲಿ ಮನೆ ಕಟ್ಟಿದ್ದರೆ ಸುಮಾರು ಮೂರುವರೆ ಲಕ್ಷ ರೂಪಾಯಿವರೆಗೆ ಮನೆ ನಿರ್ಮಾಣವಾಗುತ್ತಿತ್ತು, *2012* ರ ನಂತರ ಮನೆ ಕಟ್ಟಿದ್ದರಿಂದ ನನಗೆ ಸುಮಾರು ಹತ್ತು ಲಕ್ಷಕ್ಕಿಂತ ಹೆಚ್ಚಿಗೆ ಹಣ ಖರ್ಚಾಗಿರುತ್ತದೆ ಎಂದು ನುಡಿಯುತ್ತಾರೆ. ಆ ಬಾಬ್ತು ಪ್ರತಿವಾದಿ-*3* ಮತ್ತು *4* ರವರು ಪರಿಹಾರ ಕೊಡಬೇಕು ಎಂದು ನಿಪಿ-*5* ರಲ್ಲಿ ಕೇಳಿರುತ್ತೇನೆ. ಆ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನಗೆ ಭೂಮಿ ಮಂಜೂರಾದ ಬಗ್ಗೆ ಇಂಜೀನಿಯರ್ ರವರು ಎಸ್ಟಿಮೇಶನ್ ಮತ್ತು ಬಿಲ್ಡಿಂಗ್ ಪ್ಲಾನ್ ಅನ್ನು ತಯಾರು ಮಾಡಿಕೊಟ್ಟಿರುತ್ತಾರೆ. ಅದರಲ್ಲಿ ಅಂದಾಜು ಮೂರುವರೆ ಲಕ್ಷ ಹಣದಲ್ಲಿ ಮನೆ ನಿರ್ಮಾಣ ಪೂರ್ತಿ ಆಗುತ್ತದೆ ಎಂದು ಹೇಳಿರುತ್ತಾರೆ. ನಂತರ *2012* ರಲ್ಲಿ ಕೂಡ ನನಗೆ ಎಸ್ಟಿಮೇಶನ್ ಮತ್ತು ಬಿಲ್ಡಿಂಗ್ ಪ್ಲಾನ್ ಅನ್ನು ತಯಾರು ಮಾಡಿಕೊಟ್ಟಿರುತ್ತಾರೆ. ಅದರಲ್ಲಿ ಅಂದಾಜು ಹತ್ತು ಲಕ್ಷಕ್ಕಿಂತ ಹೆಚ್ಚಿನ ಹಣ ಮನೆ ನಿರ್ಮಾಣಕ್ಕೆ ಆಗುತ್ತದೆ ಎಂದು ಹೇಳಿರುತ್ತಾರೆ. ಮನೆ ಪೂರ್ತಿ ನಿರ್ಮಾಣವಾದ ಮೇಲೆ ಆದ ಖರ್ಚು ವೆಚ್ಚಗಳ ಬಗ್ಗೆ ದಾಖಲೆಯನ್ನು ಇಟ್ಟಿದ್ದೀರಾ ಎಂದರೆ ಸಾಕ್ಷಿ ದಾಖಲೆ ಇಟ್ಟಿಲ್ಲ ಮತ್ತು ನೆನಪಿಲ್ಲ ಎಂದು ಹೇಳುತ್ತಾರೆ. *1999* ಮತ್ತು *2012* ರಲ್ಲಿ ಇಂಜಿನೀಯರ್ ನೀಡಿದ ಎಸ್ಟಿಮೇಶನ್ ಮತ್ತು ಬಿಲ್ಡಿಂಗ್ ಪ್ಲಾನ್ ಅನ್ನು ನೀಡಿ ದಾವೆಯಲ್ಲಿ ಹಾಜರು ಮಾಡಲು ಹೇಳಿರುತ್ತೇನೆ. ಎರಡೂ ದಾಖಲೆಗಳನ್ನು ಒದಗಿಸಿದ ಇಂಜೀನಿಯರ್ ಒಬ್ಬರೇ ಆಗಿರುತ್ತಾರೆ ಅವರು ಕೋಟೇಶ್ವರದವರು ಅವರ ಹೆಸರು ಈಗ ನನಗೆ

ಸರಿಯಾಗಿ ನೆನಪಿಲ್ಲ. ಇಂಜೀನಿಯರ್ ರವರು *1999* ರಲ್ಲಿ ಎಸ್ಟಿಮೇಶನ್ ಮತ್ತು ಬಿಲ್ಡಿಂಗ್ ಪ್ಲಾನ್ ಅನ್ನು ನೀಡುವಾಗ ಪಂಚಾಯತ್ ನವರು ದಾಖಲೆಗಳನ್ನು ಪರಿಶೀಲಿಸಿದ್ದಾರಾ ಇಲ್ಲವಾ ನನಗೆ ಗೊತ್ತಿಲ್ಲ.

ನಿಪಿ-*7, 8, 9, 10* ರ ದಾಖಲಾತಿಯನ್ನು ಈ ದಾವೆಯಲ್ಲಿ ಯಾವ ಕಾರಣಕ್ಕಾಗಿ ಹಾಜರು ಮಾಡಿದ್ದೀರಿ ಎಂದರೆ ಸಾಕ್ಷಿ ಪಂಚಾಯತ್ ನಿಂದ ಎಷ್ಟು ಸಾರ್ವಜನಿಕ ಹಣ ಪೋಲಾಗಿದೆ ಎಂದು ತಿಳಿಯುವ ಬಾಬ್ತು ಜೊತೆಗೆ ನನ್ನ ವಿರುದ್ದ ಎಷ್ಟು ಹಣವನ್ನು ನ್ಯಾಯಾಲಯದ ವೆಚ್ಚವಾಗಿ ಖರ್ಚು ಮಾಡಿದ್ದಾರೆ ಎಂದು ತಿಳಿಯುವ ಸಲುವಾಗಿ ಪಡೆದು ಹಾಜರು ಪಡಿಸಿರುತ್ತೇನೆ. ನನಗೆ ತೊಂದರೆ ಕೊಡುವ ಸಲುವಾಗಿ ಪ್ರತಿವಾದಿಯರು ಸಾರ್ವಜನಿಕರ ಹಣವನ್ನು ಪೋಲು ಮಾಡಿದ್ದಾರೆ ಎಂದು ನ್ಯಾಯಾಲಯಕ್ಕೆ ತಿಳಿಸಲು ಈ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಈ ದಾವೆ ಪಂಚಾಯತ್ ನವರು ಸಾರ್ವಜನಿಕ ಹಣವನ್ನು ಪೋಲು ಮಾಡಿದ್ದನ್ನು ಪ್ರಶ್ನಿಸಿ ಮಾಡಿದ ದಾಖಲೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾಖಲೆಗಳು ಈ ಪ್ರಕರಣಕ್ಕೆ ಯಾವ ರೀತಿ ಸಂಬಂಧಿಸಿದ್ದವು ಎಂದರೆ ಸಾಕ್ಷಿ ಈಗ ನನಗೆ ನೆನಪಾಗುತ್ತಿಲ್ಲ ಎಂದು ನುಡಿಯುತ್ತಾರೆ.

(ಮುಂದುವರಿದ ಪಾಟಿ ಸವಾಲಿಗಾಗಿ ಮುಂದೂಡಲಾಯಿತು)

ಓದಿ ಹೇ, ಕೇ, ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ